ಫೆಬ್ರುವರಿ - 1

ನೀವು ಬಲಕ್ಕಾಗಲಿ, ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು.

-ಯೆಶಾಯ 30:21

ನಾವು ನಮ್ಮ ಜೀವನದ ಅನುಭವದಲ್ಲಿ ಸಂಕಷ್ಟದ ಸ್ಥಿತಿ ತಲುಪಿ ನಡೆಯುವಂಥ ದಾರಿಯಲ್ಲಿ ಮುಂದೆ ಎಡಕ್ಕಾಗಲಿ, ಬಲಕ್ಕಾಗಲಿ ತಿರುಗಲು ಗೊತ್ತಾಗದೆ ಇರುವಾಗ ನಾವು ತಕ್ಷಣ ಪ್ರಯಾಣವನ್ನು ನಿಲ್ಲಿಸಿ ದೇವರ ಮಾರ್ಗದರ್ಶನಕ್ಕೆ ಕಿವಿಗೊಡುವದು ಸೂಕ್ತವಾಗಿದೆ, ಅಥವಾ ಮತ್ತೊಂದು ರೀತಿಯಲ್ಲಿ ಹೇಳುವದಾದರೆ ದೇವರ ವಾಕ್ಯವನ್ನು ಅಧ್ಯಯನ ಮಾಡಿ ಅದರಲ್ಲಿ ಅಡಗಿರುವ ಸೂತ್ರ ಮತ್ತು ಸಿದ್ಧಾಂತ, ಸಂಧಿಗ್ದ ಹಾಗೂ ಕ್ಲಿಷ್ಟಕರವಾದ ಸನ್ನಿವೇಶಗಳ ಉದಾಹರಣೆಗಳನ್ನು ಗಮನಿಸಿ ದೇವರ ಚಿತ್ತವನ್ನು ತಿಳಿದು, ಆತ್ಮದ ನಡೆಸುವಿಕೆಗಾಗಿ ಪ್ರಾರ್ಥಿಸಿ, ನಮ್ಮ ಮನಸ್ಸನ್ನು ಪ್ರೀತಿ, ವಿಧೇಯತ್ವ ಹಾಗೂ ನಂಬಿಕೆಯಲ್ಲಿ ನೆಲೆಗೊಳಿಸಿ ಮುಂದೆ ಹೆಜ್ಜೆಯಿಟ್ಟು ನಡೆಯಬೇಕಾಗಿದೆ-Z '95, 6 (ಖ 1753).

*** *** ***

ಫೆಬ್ರುವರಿ - 2

ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ.

-ರೋಮಾ 8:13

ಶರೀರ ಭಾವವನ್ನು ಅನುಸರಿಸಿ ಬದುಕುವದು ಅಂದರೇನು? ಬಿದ್ದುಹೋಗಿರುವ ಮಾನವ ಸ್ವಭಾವ ದೃಢತೆಯಿಲ್ಲದೆ ಆಶಿಸುವ, ಮೆಚ್ಚುವ ಮತ್ತು ಸುಖ ಬಯಸುವದನ್ನು ಈಡೇರಿಸುವ ಜೀವಿತ ಎಂದು ಉತ್ತರಿಸುತ್ತೇವೆ. ಇದು ಅತಿ ಸುಲಭವಾಗಿ ಸಾಧ್ಯವಾದ ವಿಷಯ. ಇಂಥ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದ್ದೇನೆಂದರೆ, ಈ ದಿಶೆಯ ಸ್ವಭಾವವನ್ನು ಉದಾಸೀನತೆಯಿಂದ ತೊರೆದು ಅವುಗಳ ವಿರುದ್ಧವಾಗಿ ಹೋರಾಡದೆ ಸುಮ್ಮನೆ ಇದ್ದು ಬಿಡುವದಾಗಿದೆ. ಯಾವಾಗ ನಾವು ಸುಮ್ಮನೆ ಇದ್ದು ಬಿಡುತ್ತೇವೆಯೋ ಆಗ ಹಳೆಯ ಸ್ವಭಾವವೆಂಬ ಈ ತೊರೆಯಲ್ಲಿ ನಾವು ತೇಲುತ್ತಾ ಪ್ರಾರಂಭದಲ್ಲಿ ನಿಧಾನವಾಗಿ ಸಾಗಿ, ನಂತರ ವೇಗವಾಗಿ ಸಾಗಿ, ರಭಸವಾಗಿ ಹರಿದು ಕೊನೆಗೆ ನಾವು ಅದನ್ನು ನಿಯಂತ್ರಿಸಲು ಸಾಧ್ಯವಾಗದ ಸ್ಥಿತಿಗೆ ತಲುಪುತ್ತೇವೆ-Z '95, 8 (ಖ 1748).

*** *** ***

ಫೆಬ್ರುವರಿ - 3

ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು, ಅವುಗಳನ್ನು ಹೊಂದುವವರಿಗೆ ಅವು ಜೀವವು, ದೇಹಕ್ಕೆಲ್ಲಾ ಅದೇ ಅರೋಗ್ಯವು. -ಜ್ಞಾನೋಕ್ತಿ 4:20,22

ಮನಸ್ಸು ದೇಹದ ಮೇಲೆ ಪ್ರಭಾವ ಬೀರುತ್ತದೆ ಎಂದು ಕೆಲವೇ ಜನರು ಮಾತ್ರ ಗುರುತಿಸುತ್ತಾರೆ. ದೇವರು ನಮ್ಮ ದೇಹ ರಚನೆಯನ್ನು ಹೇಗೆ ನಿರ್ಮಿಸಿದ್ದಾನೆಂದರೆ, ಸಾಮಾನ್ಯವಾಗಿ ಶುದ್ಧವಾದ, ಗಂಭೀರ ಹಾಗೂ ಪವಿತ್ರವಾದ ಯೋಚನೆಗಳು ನಮ್ಮ ಮಾನಸಿಕ ಹಾಗೂ ನೈತಿಕ ಸ್ಥಿತಿಯ ಮೇಲೆ ಉದಾತ್ತ ಹಾಗೂ ಉನ್ನತ ಪರಿಣಾಮವನ್ನು ಬೀರುವದಲ್ಲದೆ, ನಮ್ಮ ಭೌತಿಕ ದೇಹವನ್ನು ಚೈತನ್ಯಗೊಳಿಸುವುದು. ಅದರಂತೆಯೇ, ಇದಕ್ಕೆ ವಿರುದ್ಧವಾಗಿ ಅಶುದ್ಧ, ಪ್ರತಿಯೊಂದು ಅನೈತಿಕ, ಅಕ್ರಮ ಹಾಗೂ ದುಷ್ಟ ಯೋಚನೆಗಳು ಮತ್ತು ಕ್ರಿಯೆಗಳು ನಮ್ಮನ್ನು ಮಾನಸಿಕವಾಗಿಯೂ ಸಹ ಬಿದ್ದುಹೋಗಿರುವ ಮಾನವರಾದ ನಮ್ಮಲ್ಲಿ ತಳ ಊರಿರುವ ಅಸ್ವಸ್ತ ಜೀವಕೋಶಗಳಿಂದ ನಮ್ಮ ದೇಹದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ-Z '96, 1, 180 (ಖ 2013).

*** *** ***

ಫೆಬ್ರುವರಿ - 4

ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುದಾರರಾಗಬಾರದು.
-ಪ್ರಕಟಣೆ 18:4

ಯಾರಾರು "ನನ್ನ ಪ್ರಜೆಗಳೇ" ಎಂಬುದಾಗಿ ಕರ್ತನ ಕರೆಯುವಿಕೆಗೆ ವಿಧೇಯರಾಗಿ ಬಾಬೆಲ್ ನಗರಿಯನ್ನು ಬಿಟ್ಟು ಬಂದು ಯೋಗ್ಯರೆನಿಸಿಕೊಳ್ಳುವರೋ ಅವರು ಅವಳಿಗಾಗುವ ದಂಡನೆಯಲ್ಲಿ ಸೇರುವುದಿಲ್ಲ. ಯಾಕೆಂದರೆ, ವಿಧೇಯರಾಗಿ ಬರುವವರು ಬಾಬೆಲ್ ನಗರಿಯ ನೈಜತೆಯನ್ನು ಗಮನಿಸಿ, ತಾವು ಅವಳ ಪಾಪದಲ್ಲಿ ಸೇರಲಿಲ್ಲವೆಂಬುದನ್ನು ತಿಳಿದಿರುವರು. ಯಾರ್ಯಾರು ಸತ್ಯದ ಬೆಳಕು ಪ್ರಕಾಶಿಸಿರುವ ಪರಿಣಾಮವಾಗಿ ಅವಳ ದುರ್ಬೋಧನೆ, ದುರ್ಗುಣಗಳು ಹಾಗೂ ಅವಳ ಹೇಯವಾದ ಕಾರ್ಯಗಳು ಪ್ರಕಟವಾಗಿದ್ದರೂ ಅವಳನ್ನು ಬಿಟ್ಟು ಬರದೆ ಅವಳ ಜೊತೆಯಲ್ಲಿಯೇ ಉಳಿದಿದ್ದು ಅವಳನ್ನು ಅನುಮೋದಿಸುವವರು ಅವಳಿಗಾಗುವ ದಂಡನೆ, ಉಪದ್ರವಗಳನ್ನು ಅನುಭವಿಸಿ ಹಣಜಿ ತರಗತಿಗೆ ಸೇರಿದವರಾಗಿರುವರು-Z '100, 3 (ಖ 2553).

*** *** ***

ಫೆಬ್ರುವರಿ - 5

ದೇವರ ಚಿತ್ತವೇನೆಂದರೆ, ನೀವು ಶುದ್ಧರಾಗಿ ಇರಬೇಕೆಂಬುದೇ.

-1ಥೆಸಲೋನಿಕ 4:3

ದೇವರ ಚಿತ್ತವೇನೆಂಬುದನ್ನು ತಿಳಿಯಲಿಕ್ಕೆ ನಾವು ದೈವೋಕ್ತಿಗಳನ್ನು ಗಮನಿಸುವಾಗ, ದೇವರು ನಮ್ಮಿಂದ ನಿರೀಕ್ಷಿಸುವ ಮಹತ್ತಾದ ಕಾರ್ಯವು ಏನೆಂದರೆ, ನಾವು ಇತರರಿಗೋಸ್ಕರ ಕೆಲಸ ಮಾಡದೆ, ನಮ್ಮನ್ನು ದೇವರ ಚಿತ್ತಕ್ಕೆ ಒಳಪಡಿಸಿಕೊಂಡು, ಸ್ವಾರ್ಥತೆಯನ್ನು ಅಧೀನದಲ್ಲಿಟ್ಟುಕೊಂಡು ಜಯಸಾಧಿಸಿ ನಾವು ನಮ್ಮನ್ನೇ ಆಳುವದಾಗಿದೆ. ಮಿಕ್ಕ ಎಲ್ಲಾ ಕಾರ್ಯಗಳೆಂದರೆ, ನಮ್ಮ ಸೇವೆಯು ನಂಬಿಕೆಯ ಮನೆವಾರ್ತೆಯವರಿಗೆ ಹಾಗೂ ನಮ್ಮ ಸತ್ಕಾರ್ಯಗಳು ಎಲ್ಲಾ ಮನುಷ್ಯರಿಗೆ ಮನೆಯೊಳಗಿನಿಂದಲೂ ಮತ್ತು ವಿದೇಶ ಧರ್ಮ ಪ್ರಚಾರ ಸಂಸ್ಥೆಗಳ ಮೂಲಕವೂ ಸುವಾರ್ತಾ ಸೇವೆ ಮಾಡುವದು ಆಗಿದೆ. ಇವೆಲ್ಲವುಗಳಿಗಿಂತಲೂ ನಮ್ಮ ನಮ್ಮೊಳಗೆ ನಡೆಸುವ ಕಾರ್ಯ ಬಹು ಪ್ರಾಮುಖ್ಯವಾದುದಾಗಿದೆ. ದೈವ ಪ್ರೇರಣೆಗೊಳಗಾಗಿರುವ ಅಪೋಸ್ತಲನು ಘೋಷಿಸುವಂತೆ ನಾವು ದೇವರ ವಾಕ್ಯವನ್ನು ಇತರರಿಗೆ ನಿರರ್ಗಳವಾಗಿ ಪ್ರಚಾರ ಮಾಡಿದರೂ, ನಮ್ಮಲ್ಲಿರುವದೆಲ್ಲವನ್ನು ಬಡವರಿಗೆ ದಾನ ಮಾಡಿದರೂ, ಒಂದು ಒಳ್ಳೆಯ ಕಾರ್ಯದ ನಿಮಿತ್ತ ನಮ್ಮನ್ನು ನಾವು ಬಲಿದಾನ ಮಾಡಿದಾಗ್ಯೂ ದೇವರ ಪ್ರೀತಿ, ಕ್ರಿಸ್ತನ ಮನಸ್ಸು ಇವುಗಳು ನಮ್ಮಲ್ಲಿ ಅಭಿವೃದ್ಧಿಗೊಂಡು ನಮ್ಮನ್ನು ಆಳ್ವಿಕೆ ಮಾಡಿದರೂ ಪ್ರೀತಿ ಇಲ್ಲದೆ ಇದ್ದ ಪಕ್ಷದಲ್ಲಿ ದೇವರ ದಿವ್ಯ ದೃಷ್ಟಿಯಲ್ಲಿಯೂ ಹಾಗೂ ಆತನ ಎಣಿಕೆಯಲ್ಲಿ ನಾವು ಏನೂ ಇಲ್ಲದವರಾಗಿರುತ್ತೇವೆ-Z ’99, 4 (ಖ 2411).

***  ***  ***

ಫೆಬ್ರುವರಿ - 6

ಯಾಕೆಂದರೆ, ಉದ್ಧಾರವು ಮೂಡಲಿಂದಾಗಲಿ, ಪಡುವಲಿಂದಾಗಲಿ ಅರಣ್ಯದಿಂದಾಗಲಿ (ದಕ್ಷಿಣದಿಂದಾಗಲಿ) ಬರುವದಿಲ್ಲ. ದೇವರೇ ನ್ಯಾಯಾಧೀಶನಾಗಿ ಒಬ್ಬನನ್ನು ತೆಗೆದು ಇನ್ನೊಬ್ಬನನ್ನು ಸ್ಥಾಪಿಸುತ್ತಾನೆ. -ಕೀರ್ತನೆ 75:6,7

ನಮ್ಮ ಅನುಕೂಲಕ್ಕೆ ತಕ್ಕಂತೆ ಆಶೆ ಆಕಾಂಕ್ಷೆಗಳಿರಬಹುದು. ಆದರೆ, ಅವುಗಳೆಂದಿಗೂ ನೆರವೇರುವದಿಲ್ಲ. ನಾವು ಅತಿಶಯವಾದ ಹೊಗಳಿಕೆ, ಪ್ರಶಂಸೆಯನ್ನು ಪಡೆಯಲು ಪ್ರಯತ್ನಿಸುವದನ್ನು ಕರ್ತನು ಸಹಿಸುವದಿಲ್ಲ. ನಮಗೆ ಯಾವುದು ಒಳ್ಳೆಯದು, ಯಾವುದು ಸರಿ ಎನ್ನುವದನ್ನು ಕರ್ತನು ನಮಗಿಂತ ಚೆನ್ನಾಗಿ ತಿಳಿದಿರುತ್ತಾರೆ. ಆತನ ಪರಾಂಬರಿಕೆಯಲ್ಲಿ ನಾವು ಸದಾ ಸಂತೃಪ್ತರಾಗಿದ್ದುಕೊಂಡು ತೂಕಡಿಸದೆ, ಯಾವಾಗಲೂ ಕಾರ್ಯ ತತ್ಪರತೆಯುಳ್ಳವರಾಗಿರಬೇಕು. ಉದಾಸೀನವಾಗಿರದೆ ಎಚ್ಚರವಾಗಿದ್ದು, ಅಸಡ್ಡೆಯಾಗಿರದೆ ದೇವರ ಚಿತ್ತವನ್ನು ನೆರವೇರಿಸಲು ಯಾವಾಗಲೂ ಹಾತೊರೆಯುತ್ತ ಅತ್ಯಾಸಕ್ತಿಯಿಂದ ಕೂಡಿರಬೇಕು. ಹಾಗೂ ತಾಳ್ಮೆಯ ಹಿಡಿತದಲ್ಲಿದ್ದು ಯಾವದನ್ನೂ ಮರೆಯದೆ ಅಥವಾ ಕಡೆಗಾಣಿಸದೆ, ಅದೇ ತಾಳ್ಮೆಯಿಂದ ಕಾದುಕೊಂಡಿರಬೇಕು. ಆಗ ದೇವರು ತಕ್ಕ ಸಮಯದಲ್ಲಿ ತನ್ನ ಸಂಕಲ್ಪವನ್ನು ನಮ್ಮಲ್ಲಿ ನೆರವೇರಿಸಲು ನಮ್ಮನ್ನು ಕೊಂಡೊಯ್ಯುವನು-Z ’95, 11 (ಖ 1756).

***  ***  ***

ಫೆಬ್ರುವರಿ - 7

ಪ್ರೀತಿಯು ಮತ್ತೊಬ್ಬರಿಗೆ ಯಾವ ಕೇಡನ್ನೂ ಮಾಡುವದಿಲ್ಲ. ಆದಕಾರಣ, ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ. -ರೋಮಾಪುರ 13:10

ಯಾರ ಹೃದಯವು ನೂತನ ಒಡಂಬಡಿಕೆಯ ನಿಯಮಗಳಾದ ಪ್ರೀತಿ, ಕರುಣೆ, ಕ್ಷಮಾಗುಣ, ಸೌಹಾರ್ದತೆ, ಒಳ್ಳೆಯ ನಡತೆಗಳಿಗೆ ಅನುಗುಣವಾಗಿರುವದಿಲ್ಲವೋ ಅವನು ದೇವರ ಮಗನೆನಿಸಿಕೊಳ್ಳುವದಕ್ಕೂ ಹಾಗೂ ಕ್ರಿಸ್ತನ ಅನುಯಾಯಿಯಾಗಿರಲು ಸಾಧ್ಯವಿಲ್ಲ. ನಾವು ಹೃದಯಪೂರ್ವಕವಾಗಿ ಸಹೋದರರನ್ನ ಪ್ರೀತಿಸದೆ ಹಾಗೂ ಎಲ್ಲಾ ಮನುಷ್ಯರನ್ನು ಸೌಮ್ಯತೆಯಿಂದಲೂ ಹಾಗೂ ಬಲಾತ್ಕಾರದಿಂದ ತುಂಬಿದ ಪರಿಸರವನ್ನು ಪ್ರೀತಿಸದೆ ಇರುವ ಪಕ್ಷದಲ್ಲಿ ನಾವು ನಮ್ಮನ್ನೇ ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಬಲಿದಾನವನ್ನು ಮಾಡಲಾಗುವದಿಲ್ಲ. ಸ್ವಲ್ಪ ಕಾಲದಲ್ಲಿ ಅಂಥವನನ್ನು ಒಣ ಜಂಭ ಮತ್ತು ಅಹಂಕಾರವು ಬಲಿದಾನವನ್ನು ಮಾಡಲು ಬಿಡದೆ, ಭಾಗ ಭಾಗವಾಗಿಯೂ ಪೂರ್ವ ಸೂಚನೆಯಿಲ್ಲದೆ ಸ್ವಾರ್ಥತೆಯು ಸಂಪೂರ್ಣವಾಗಿ ಆವರಿಸಿ ಅವನನ್ನು ಆಕ್ರಮಿಸಿಕೊಳ್ಳುವದು-Z '98, 201 (ಖ 2328).

***   ***   ***

ಫೆಬ್ರುವರಿ - 8

ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹಪಟ್ಟೆ ಎಂದು ಹೇಳಿದನು.

-ಮತ್ತಾಯ 14:31

ಅಲ್ಪ ವಿಶ್ವಾಸವನ್ನು ಜಯಿಸಿ, ನಮ್ಮ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ನಾವು ಏನು ಮಾಡಬೇಕು. ಇದಕ್ಕೆ ಉತ್ತರವಾಗಿ, ಅಪೋಸ್ತಲರು ಪೂರ್ವಕಾಲದಲ್ಲಿ ಪ್ರಾರ್ಥಿಸಿದಂತೆ, “ಕರ್ತನೇ ನಮ್ಮ ನಂಬಿಕೆಯನ್ನು ಹೆಚ್ಚಿಸು” , ಎಂದು ಪ್ರಾರ್ಥಿಸಬೇಕು. ಅನಂತರ ಈ ಪ್ರಾರ್ಥನೆಗೆ ಅನುಗುಣವಾಗಿ ಪ್ರತಿಯೊಬ್ಬನು ತನ್ನ ಹೃದಯದಲ್ಲಿ ವಿಶ್ವಾಸವನ್ನು ಅಭ್ಯಾಸಿಸಬೇಕು. ಅಂದರೆ (1), ದೇವರ ವಾಕ್ಯದಲ್ಲಿರುವ ದೈವ ವಾಗ್ದಾನಗಳನ್ನು ಸದಾ ಸ್ಮರಿಸುತ್ತಾ ಅವುಗಳಲ್ಲಿ ಚೆನ್ನಾಗಿ ಪಳಗಿ ತಂದೆಯ ವಾಕ್ಯಗಳನ್ನು ನಮ್ಮದಾಗಿಸಿಕೊಳ್ಳಬೇಕು ಹಾಗೂ (2) ಈ ರೀತಿಯಾಗಿ ದಿನ ನಿತ್ಯ ಸ್ಮರಿಸುತ್ತಾ ತಾನು ಕರ್ತನೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ, ಪ್ರತಿಜ್ಞೆಯನ್ನು ನೆರವೇರಿಸುತ್ತಾ ಕರ್ತನು ಮಾಡಿರುವ ವಾಗ್ದಾನಗಳನ್ನು ಸದಾ ತನ್ನ ಹೃದಯದಲ್ಲಿಯೂ ಹಾಗೂ ತನ್ನ ತುಟಿಗಳಲ್ಲಿಯೂ ಧ್ಯಾನಿಸುತ್ತಾ ಕರ್ತನಿಗೆ ಕೃತಜ್ಞತಾಸ್ತುತಿಯನ್ನು ಮಾಡುತ್ತಾ ಅವುಗಳನ್ನು ತನ್ನದಾಗಿಸಿಕೊಂಡು ಪ್ರಾರ್ಥಿಸಬೇಕು. ದೇವರ ವಾಗ್ದಾನಗಳನ್ನು ಆಲೋಚಿಸಿ ಸಹೋದರರ ಮಧ್ಯದಲ್ಲಿ ಪವಿತ್ರವಾದ ವಿಷಯಗಳ ಬಗ್ಗೆ ಅವರೊಡನೆ ಕೂಡಿ ವಿಚಾರಮಾಡಿ ಹಾಗೂ ಕೂಟಗಳಲ್ಲಿ ಮಾತನಾಡುತ್ತಾ ಆ ವಾಗ್ದಾನಗಳನ್ನು ತನ್ನದಾಗಿ ಮಾಡಿಕೊಳ್ಳಬೇಕು-Z '00, 170 (ಖ 2642).

***   ***   ***

ಫೆಬ್ರುವರಿ - 9

ನನ್ನ ಮನವೇ, ನಿನ್ನ ವಿಶ್ರಾಂತಿಯ ನೆಲೆಗೆ ತಿರುಗು. ಯೆಹೋವನು ನಿನಗೆ ಮಹೋಪಕಾರಗಳನ್ನು ಮಾಡಿದ್ದಾನಲ್ಲಾ. -ಕೀರ್ತನೆ 116:7

ಒಬ್ಬ ಕ್ರಿಸ್ತ ಭಕ್ತನ, "ಆಲೋಚನೆಯ ಅಭ್ಯಾಸ" ಗಳು ಅವನ ಆತ್ಮೀಯ ಜೀವನದ ಉನ್ನತಿ ಅಥವಾ ಅವನತಿಗೆ ಕಾರಣಭೂತವಾಗಿರುವದು. ಆದುದರಿಂದ, ಅವನು ಒಳ್ಳೆಯ ಆಲೋಚನೆ ಮಾಡುವದನ್ನು ಅಭ್ಯಸಿಸುವದು ಸೂಕ್ತ. "ಆಲೋಚನೆಯ ಅಭ್ಯಾಸ" ಎಂದರೆ, ಮಾನಸಿಕವಾಗಿ ಶಾಂತ ಸ್ಥಿತಿಯಲ್ಲಿರುವಾಗ ಮನಸ್ಸು (ಗುಣಾತ್ಮಕವಾಗಿ) ಆ ಸ್ಥಿತಿಗೆ ಹಿಂದಿರುಗುವುದಾಗಿದೆ. ನಾವು ದಿನ ನಿತ್ಯದ ಕರ್ತವ್ಯವನ್ನು ನಿಭಾಯಿಸುವಾಗ ನಮ್ಮ ಶಕ್ತಿಯನ್ನು ಆ ಕೆಲಸದ ಮೇಲೆ ಪ್ರಯೋಗ ಮಾಡಿ ಕಾರ್ಯಸಾಧಿಸಬೇಕು. ಅದರ ಬದಲು ನಾವು ನಮ್ಮ ಮನಸ್ಸನ್ನು ಆ ಕಾರ್ಯದ ಮೇಲೆ ಕ್ರೋಢೀಕರಿಸದೆ ಯಾಂತ್ರಿಕವಾಗಿ ಮಾಡುವದಾದರೆ, ಆ ಕೆಲಸ ಚೆನ್ನಾಗಿ ಆಗುವದಿಲ್ಲ. ಆದರೂ ಇಲ್ಲಿಯೂ ಕ್ರಿಸ್ತೀಯ ತತ್ವಗಳು ಭಕ್ತನ ಗುಣದಲ್ಲಿ ಆಳವಾಗಿ ಬೇರೂರಿರುವ ಪಕ್ಷದಲ್ಲಿ ತನಗೆ ಗೊತ್ತಿಲ್ಲದಂತೆ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲು ಸಾಧ್ಯವಾಗುತ್ತದೆ. ಆದರೆ, ದಿನ ನಿತ್ಯದ ಕಾರ್ಯದ ಒತ್ತಡ ಮತ್ತು ಅದರ ಮೇಲಿನ ಲಕ್ಷ್ಯವನ್ನು ಸ್ವಲ್ಪ ಸಮಯ ತೆಗೆದುಬಿಟ್ಟಲ್ಲಿ ಆತನ 'ಆಲೋಚನೆಯ ಅಭ್ಯಾಸವು' ದೇವರಲ್ಲಿ ವಿಶ್ರಾಂತಿ ಪಡೆಯಲು ಹಿಂತಿರುಗುವದು-Z '95, 250 (ಖ 1884).

*** *** ***

ಫೆಬ್ರುವರಿ - 10

ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವದಕ್ಕೆ ಯಾರಿಗೂ ಅವಕಾಶ ಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು.
-1ತಿಮೋಥಿ 4:12

ಪ್ರತಿಯೊಬ್ಬ ಕ್ರಿಸ್ತ ಭಕ್ತನು, ಇತರರಿಗೆ ತನ್ನ ಮಾದರಿಯನ್ನು ಅನುಸರಿಸುವ ಯೋಗ್ಯತೆಯನ್ನು ಸಂಪಾದಿಸಲು ಪ್ರಯತ್ನಿಸಬೇಕು. ಅಂದರೆ, ಕ್ರಿಸ್ತನ ಸೇವೆಯಲ್ಲಿ ಉತ್ಸುಕತೆಯನ್ನು ತೋರುವ ಹಾಗೂ ತನ್ನ ನಿತ್ಯ ಜೀವನದಲ್ಲಿ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುವ ಪ್ರಯಾಣಿಕನಾಗಿ ಹುಮ್ಮಸ್ಸಿನಿಂದ ಕ್ರಿಸ್ತನನ್ನು ಅನುಸರಿಸುವ ಮಾದರಿಯಾಗಿ ಜೀವಿಸಬೇಕು. ಆದರೆ, ಈಗಿನ ಜೀವನದಲ್ಲಿ ನಾವು ಮಹಿಮೆಯುಳ್ಳ ನೈತಿಕ ಸ್ಥಿತಿಯ ಪರಿಪೂರ್ಣ ಮಾದರಿಯನ್ನು ಧಾರ್ಮಿಕ ಪರಿಶುದ್ಧತೆಯನ್ನು ಪಡೆಯಲು ಸಾಧ್ಯವಿಲ್ಲ. ಈ ಮಹಿಮಾ ಗುಣ ಲಕ್ಷಣಗಳು ಕ್ರಿಸ್ತನಲ್ಲಿರುವದನ್ನು ನಾವು ಕಾಣಬಹುದು. ಈ ರೀತಿಯಲ್ಲಿ ನನ್ನನ್ನು ಅಥವಾ ನಮ್ಮನ್ನು ಅನುಸರಿಸಿರಿ ಎಂಬುದಾಗಿ ಅಪೋಸ್ತಲ ಪೌಲನು ಎಂದಿಗೂ ಹೇಳಲಿಲ್ಲ. ಆದರೆ, "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" - ಎಂಬುದಾಗಿ ಹೇಳಿದ್ದಾನೆ. (1ಕೊರಿಂಥ 11:1) ಈತನು ಕ್ರಿಸ್ತನ ಮಾದರಿಯನ್ನು ಅನುಸರಿಸುವ ಒಂದು ಮಹಾ ಉದಾಹರಣೆಯಾಗಿದ್ದಾನೆಯೇ ಹೊರತು, ಕ್ರಿಸ್ತನಲ್ಲಿ ಅಡಕವಾಗಿರುವ ಮಹಿಮೆಯುಳ್ಳ ಪರಿಪೂರ್ಣತೆಯಲ್ಲ. ನಾವು ಆತನಲ್ಲಿದ್ದಂತೆ ಉತ್ಸುಕತೆ, ಆಸಕ್ತಿ ಹಾಗೂ ಕ್ರಿಸ್ತನನ್ನು ಅನುಸರಿಸಿ ಆತನ ಚಿತ್ತವನ್ನು ನೆರವೇರಿಸಬೇಕೆಂಬ ಕುತೂಹಲವನ್ನು ನಾವು ಅನುಕರಿಸುವವರಾಗಿರಬೇಕು-Z '95, 251 (ಖ 1884).

*** *** ***

ಫೆಬ್ರುವರಿ - 11

ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ, ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ, ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ, ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನು ಹೀಗೆಯೇ ಹಿಂಸೆಪಡಿಸಿದರಲ್ಲಾ. -ಮತ್ತಾಯ 5:11,12

ದೇವರ ಸೇವೆಯಲ್ಲಿ ಕ್ರಿಯಾತ್ಮಕವಾಗಿ ನಿರತರಾಗಿರುವ ಭಕ್ತರನ್ನು ಹಿಂಸಿಸುವದು ಹಾಗೂ ವಿರೋಧಿಸುವುದು ಅನಿವಾರ್ಯ ಹಾಗೂ ಸಹಜವಾದದ್ದು. ಈ ಪರಿಸ್ಥಿತಿಯನ್ನು ಭಕ್ತರು ಯಥಾರ್ಥತೆಯಿಂದಲೂ, ಸಮರ್ಥನೆಯಿಂದಲೂ ಎದುರಿಸಬೇಕು. ಒಂದು ವೇಳೆ ವಿರೋಧಿಯು ತನ್ನ ಸಹಜ ಗುಣದಲ್ಲಿ ಮುಂದುವರಿದರೆ ಅವನಿಗೆ ಎಚ್ಚರಿಕೆ ಹೇಳಿ ಅವನು ಹೋಗುವ ಮಾರ್ಗವನ್ನು ಬಿಟ್ಟುಬಿಡಬೇಕು. ನಾವು ಇವನನ್ನು ತೊರೆದು ಇತರರಿಗೆ ರಕ್ಷಣೆಯ ಸಂದೇಶವನ್ನು ನೀಡಲು ಮುಂದಾಗಬೇಕು. ನಮ್ಮ ಕರ್ತನು ಇಂತಹ ವಿರೋಧವನ್ನು ನಿಭಾಯಿಸುವಾಗ ಅನುಸರಿಸಿದ ಮಾರ್ಗ ಹಾಗೂ ನಡತೆಯಿಂದ ನಮಗೆ ಉತ್ಕøಷ್ಟವಾದ ಪಾಠ ದೊರೆಯುತ್ತದೆ-Z ’94, 368 (ಖ 1735).

*** *** ***

ಫೆಬ್ರುವರಿ - 12

ಆ ತಾಳ್ಮೆಯು ಸಿದ್ಧಿಗೆ ಬರಲಿ; ಆಗ ನೀವು ಶಿಕ್ಷಿತರೂ, ಸರ್ವ ಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ. -ಯಾಕೋಬ 1:4

ತಾಳ್ಮೆ ಎಂಬ ಗುಣವನ್ನು ಸಾಧಿಸದೆ ಇದ್ದ ಪಕ್ಷದಲ್ಲಿ ಅಭಿವೃದ್ಧಿಯಾಗುವ ಪಥದಲ್ಲಿ ಒಂದು ಹೆಜ್ಜೆಯೂ ಮುಂದಿಡಲು ಸಾಧ್ಯವಿರುವದಿಲ್ಲ. ಬೇರೆ ಎಲ್ಲಾ ಗುಣಗಳಿಗಿಂತ ಈ ಗುಣವು ಕ್ರಿಸ್ತೀಯ ಸಮಗ್ರ ಗುಣಗಳನ್ನು ಅಲಂಕರಿಸುತ್ತದೆ. ಲೋಕದ ಪ್ರಶಂಸನೆಗೆ ಅಥವಾ ಇನ್ನೊಂದು ರೀತಿಯಲ್ಲಿ ಸತ್ಯ ಪ್ರೇರಣೆ ಮಾಡುವ ಸರ್ವ ಸುಗುಣವುಳ್ಳ ದೇವರನ್ನು ಮಹಿಮೆಪಡಿಸುತ್ತದೆ. ಮಾನವ ಬಲಹೀನತೆ ಹಾಗೂ ಅಪರಿಪೂರ್ಣತೆಯೆಂಬ ಅಲೆಯನ್ನು ತಡೆಯುವದರಲ್ಲಿ ಈ ಸದ್ಗುಣವು ದೀರ್ಘಶಾಂತಿಯಿಂದ ಹೋರಾಡುತ್ತದೆ. ದೈವ ಹೋಲಿಕೆಯನ್ನು ಪುನಃ ಪಡೆಯಲು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸುತ್ತದೆ. ಇದು ಶೀಘ್ರವಾಗಿ ಕೋಪಿಸಿಕೊಳ್ಳುವದಿಲ್ಲ; ಆದರೆ, ಕ್ಷಮಾಗುಣವನ್ನು ವ್ಯಕ್ತಗೊಳಿಸುತ್ತದೆ. ಸತ್ಯ ಮತ್ತು ನೀತಿಯ ಪಥವನ್ನು ಶೀಘ್ರವಾಗಿ ಅರಿತುಕೊಳ್ಳುತ್ತದೆ. ಹಾಗೂ ಆ ಪಥದಲ್ಲಿ ತಪ್ಪದೆ ಮುಂದೆ ಸಾಗುತ್ತದೆ. ಅದು ತನ್ನ ಕೊರತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಇತರರಲ್ಲಿ ಕಂಡುಬರುವ ಅಪರಿಪೂರ್ಣತೆ ಹಾಗೂ ಬಲಹೀನತೆಗಳನ್ನು ಗುರುತಿಸಿ ಸಹಾನುಭೂತಿಯನ್ನು ತೋರಿಸುತ್ತದೆ-Z ’93, 295 (ಖ 3090).

*** *** ***

ಫೆಬ್ರುವರಿ - 13

ಪ್ರೀತಿಯು ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ. -1ಕೊರಿಂಥ 13:5

ಕರ್ತನ ಈ ಆಜ್ಞೆಯನ್ನು ಕಡೆಗಾಣಿಸುವವನು ತನ್ನನ್ನು ತಾನೇ ಮೋಸಗೊಳಿಸುವಂಥ ಕೆಟ್ಟ ಸಂದೇಹವನ್ನುಪಡುವ ಪ್ರವೃತ್ತಿಗೆ ಒಳಗಾಗುತ್ತಾನೆ. ತಾನು ಬೇರೆ ಎಲ್ಲಾ ವಿಷಯಗಳಲ್ಲಿ ಎಷ್ಟೋ ಎಚ್ಚರಿಕೆಯಿಂದ ಇದ್ದರೂ ತನ್ನ ಸಹಚರರೊಂದಿಗೆ ಮೋಸಗೊಳ್ಳುವ ಕೆಟ್ಟತನವನ್ನು ಹೃದಯದಲ್ಲಿ ತುಂಬಿಕೊಂಡಿರುವ ಸಂದೇಹವನ್ನು ವ್ಯಕ್ತಪಡಿಸುತ್ತಾನೆ. ಹೀಗೆ ಆತನು ದೇವರಲ್ಲೂ ಸಂದೇಹಪಡಲು ಮುಂದಾಗುವನಲ್ಲದೆ, ಕರ್ತನ ಪ್ರೀತಿಗೆ ವಿರುದ್ಧವಾಗಿ ಅವನಲ್ಲಿನ ಮತ್ಸರ ಹಾಗೂ ಭ್ರಷ್ಟ ಮನಸ್ಸು ಹೋರಾಡುತ್ತದೆ. ಈ ಯುದ್ಧದಲ್ಲಿ ಯಾವುದಾದರೂ ಒಂದು ಜಯಶಾಲಿಯಾಗಲು ಸಾಧ್ಯ. ಆದುದರಿಂದ, ಕೆಟ್ಟ ಸ್ವಭಾವವನ್ನು ಭಕ್ತನಾದವನು ತೆಗೆದುಹಾಕಬೇಕು, ಇಲ್ಲದಿದ್ದರೆ, ಅವನನ್ನು ಈ ಸ್ವಭಾವವು ಕೆಡಿಸಿ ಭ್ರಷ್ಟನನ್ನಾಗಿಸುತ್ತದೆ. “ನೂತನ ಸೃಷ್ಟಿ” ಯು ಈ ದುರ್ಗುಣವನ್ನು ಅಂದರೆ, ಕೆಟ್ಟದಾಗಿ ಸಂದೇಹಪಡುವದನ್ನು ನಿರ್ಮೂಲ ಮಾಡಿದರೆ, ಈಗಿನ ಜೀವನದಲ್ಲಿ ಬರುವ ಕಷ್ಟಗಳು ಹಾಗೂ ಸುತ್ತುಗಟ್ಟುವ ಪಾಪವನ್ನು ಕೊನೆಯ ಪಕ್ಷದಲ್ಲಿ ಅರ್ಧದಷ್ಟಾದರೂ ಹೋರಾಡಿ ಗೆಲ್ಲಲು ಸಾಧ್ಯವಾಗುತ್ತದೆ-Z ’05, 212(ಖ 3594).

*** *** ***

ಫೆಬ್ರುವರಿ - 14

ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ;

ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ ಅಂದನು.

-ಮತ್ತಾಯ 12:37

ನಮ್ಮ ಎಲ್ಲಾ ಮಾತುಗಳು ನಮ್ಮ ಹೃದಯವನ್ನು ಸೂಚಿಸುವವೆಂದು ನಮ್ಮ ಕರ್ತನು ಗಣನೆಗೆ ತೆಗೆದುಕೊಳ್ಳುವನು. ನಮ್ಮ ಮಾತುಗಳು ಪ್ರತಿಭಟಿಸುವಂಥಹವು, ಅಪ್ರಮಾಣಿಕವಾದವುಗಳು, ನಿಷ್ಪ್ರಯೋಜಕವಾದವುಗಳು, ಗಾಂಬೀರ್ಯವಿಲ್ಲದವುಗಳು, ನಿಷ್ಕರುಣೆ ಹಾಗೂ ಕೃತಜ್ಞತೆ ಇಲ್ಲದವುಗಳೂ, ಅಶುದ್ಧವಾದವುಗಳು ಮತ್ತು ಮಲಿನವಾದವುಗಳಾಗಿದ್ದಲ್ಲಿ, “ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು” ಎಂಬ ತತ್ವಾನುಸಾರ, ನಮ್ಮ ಹೃದಯವು ಅದರಂತೆಯೇ ಎಂಬ ತೀರ್ಪು ಹೊಂದುವದು. ಅಪರಿಪೂರ್ಣ ಮಾನವರಾದ ನಾವು, ನಮ್ಮ ಮಾತುಗಳೂ ಹಾಗೂ ಕೃತಿಗಳಲ್ಲಿ ಪರಿಪೂರ್ಣರಾಗಿರಲು ಸಾಧ್ಯವಿಲ್ಲ. ನಾವು ಎಷ್ಟೋ ಅಭ್ಯಾಸ ಮಾಡಿದ್ದಾಗ್ಯೂ ಕೆಲವು ಸಂದರ್ಭಗಳಲ್ಲಿ ಮಾತಿನಲ್ಲಿಯೂ, ಕೃತಿಯಲ್ಲಿಯೂ ತಪ್ಪುತ್ತೇವೆ. ಆದರೂ ನಮ್ಮ ಮಾತಿನಲ್ಲಿಯೂ ಮತ್ತು ನಡತೆಯಲ್ಲಿಯೂ ಪೂರ್ಣ ನೈಪುಣ್ಯತೆಯಿಂದ, ಎಚ್ಚರವಹಿಸಿ ನಂಬಿಗಸ್ತರಾಗಿ ಪರಿಪೂರ್ಣತೆಯ ಮಟ್ಟವನ್ನು ತಲುಪಲು ಪ್ರಯತ್ನಿಸುವದನ್ನು ಬಿಡಬಾರದು-Z ’96, 32 (ಖ 1937).

*** *** ***

ಫೆಬ್ರುವರಿ - 15

ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. -1ಯೋಹಾನ 2:5

ವಿಧೇಯತ್ವವು ಒಂದು ಪರೀಕ್ಷೆ. ನಾವು ಯಾವ ಪ್ರಮಾಣದಲ್ಲಿ ದೇವರ ವಾಕ್ಯವನ್ನು ಕೈಕೊಂಡು ನಡೆಯುತ್ತೇವೋ ಅದೇ ಪ್ರಮಾಣದಲ್ಲಿ ದೇವರ ಮೇಲಣ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುವದು. ನಾವು ಕ್ರಿಸ್ತನ ಮನಸ್ಸನ್ನು ಸ್ವೀಕರಿಸಿದರೆ, ಅಂದರೆ ಪವಿತ್ರಾತ್ಮ (ಅಥವಾ ದೇವರ ಆತ್ಮ) ನಮ್ಮಲ್ಲಿದ್ದರೆ ಅದರಿಂದಾಗುವ ಪರಿಣಾಮವೇನೆಂದರೆ ದೇವರ ಚಿತ್ತ ಹಾಗೂ ಆತನ ಇಚ್ಛೆಯನ್ನು ನಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ನೆರವೇರಿಸಲು ಸಾಧ್ಯವಾಗುತ್ತದೆ. ಈ ಸಾಮರ್ಥ್ಯವು ಚಾಚೂ ತಪ್ಪದೆ ವರ್ಷದಿಂದ ವರ್ಷಕ್ಕೆ, ನಾವು ಪುನರುತ್ಥಾನದಲ್ಲಿ ನೂತನ ದೇಹವನ್ನು ಪಡೆಯುವವರೆಗೆ ವೃದ್ಧಿಯಾಗುತ್ತಿರಬೇಕು. ಈಗಿನ ಸ್ಥಿತಿಯಲ್ಲಿ ಪರಿಪೂರ್ಣತೆಯ ಮಟ್ಟವನ್ನು ತಲುಪಲು ಸಾಧ್ಯವಿಲ್ಲದೇ ಇದ್ದರೂ ನಮ್ಮ ಮನಸ್ಸನ್ನು ಹಾಗೂ ನಮ್ಮ ಚಿತ್ತವನ್ನು ಕರ್ತನಲ್ಲಿ ಲೀನಗೊಳಿಸಿ, ಆತನ ಅನ್ಯೋನ್ಯತೆಯಲ್ಲಿ ನಡೆಯುವದು ಪರಿಣಾಮಕಾರಿಯಾಗಿರುತ್ತದೆ. (1ಯೋಹಾನ 1:7)-Z ’97, 312 (ಖ 2235).

***　***　***

ಫೆಬ್ರುವರಿ - 16

ಮಾನ, ಅವಮಾನ, ಕೀರ್ತಿ, ಅಪಕೀರ್ತಿಗಳನ್ನು ಹೊಂದಿದವರೂ ಆಗಿದ್ದೇವೆ. ಮೋಸಗಾರರೆನಿಸಿಕೊಂಡರೂ ಸತ್ಯವಂತರೂ ................ ನಿಂದೆಗೆ ಅವಕಾಶ ಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗಮಾಡಿಕೊಳ್ಳುತ್ತೇವೆ.

-2 ಕೊರಿಂಥ 6:8,3

ನಮ್ಮ ಕರ್ತವ್ಯವನ್ನು ಹಾಗೂ ನಮ್ಮ ದಿನ ನಿತ್ಯದ ಚಟುವಟಿಕೆಗಳನ್ನು ನಮ್ಮ ಸಾಮರ್ಥ್ಯಕ್ಕನುಸಾರವಾಗಿ ನಿರ್ವಹಿಸುತ್ತಿರುವಾಗ ಆತನ ಆಶೀರ್ವಾದ ಹಾಗೂ ಆತನ ಸಹಾಯ ನಮ್ಮ ಮೇಲೆ ಧಾರಾಕಾರವಾಗಿ ಸುರಿಯುತ್ತಿರುವ ಸಂದರ್ಭದಲ್ಲಿ ನಮಗೆ ಗೊತ್ತಿಲ್ಲದ ರೀತಿಯಲ್ಲಿ ಸಂಕಷ್ಟ ಉದ್ಭವಿಸಿ ನಮಗೆ ವಿರುದ್ಧವಾದ ಘಟನೆ ಸಂಭವಿಸಬಹುದು. ಆಗ ಕತ್ತಲೆಯ ಶಕ್ತಿಗಳು ನಮ್ಮ ಮೇಲೆ ಆಕ್ರಮಣ ನಡಿಸಿ ಒಂದು ಗಳಿಗೆ ನಮ್ಮ ಜೊತೆಗಾರರ ತೀರ್ಮಾನದಲ್ಲಿ ನಾವು ತಪ್ಪು ಮಾಡಿರುವವರಂತೆ ಕಂಡುಬರಬಹುದು. ಇಂತಹ ಅನುಭವಗಳು ನಮಗಾಗುವದು ಅವಶ್ಯ ಎನ್ನುವದರಲ್ಲಿ ಅನುಮಾನವೇ ಇಲ್ಲ. ಮತ್ತು ನಾವು ದೈವಾನುಗ್ರಹದಿಂದ ತ್ಯಜಿಸಲ್ಪಟ್ಟವರಂತೆ ತೋರಬಹುದು.

“ನಾನು ಬೆಳಕಿನಲ್ಲಿ ಒಬ್ಬನೇ ಪ್ರಯಾಣ ಮಾಡುವದಕ್ಕಿಂತ ಕತ್ತಲೆಯಲ್ಲೇ ದೇವರ ಜೊತೆಯಲ್ಲಿ ನಡೆಯುವುದೇ ಲೇಸು” , ಎಂಬುದಾಗಿ ಹಾಡಿದರೂ ನಾವು ನಮ್ಮನ್ನು ಕೊಚ್ಚಿಕೊಂಡಂತಾಗುತ್ತದೆ. ನಮ್ಮ ನಂಬಿಕೆ ಮತ್ತು ಭರವಸೆಯನ್ನೂ ಅಭಿವೃದ್ಧಿಗೊಳಿಸಬೇಕಾದರೆ ಈ ರೀತಿಯ ತೀವ್ರ ಪರೀಕ್ಷೆಗೆ ಒಳಪಡುವಂಥ ಅನುಭವಗಳು ನಮಗಾಗಬೇಕಾಗಿದೆ. ಆಗ ನಾವು ಕರ್ತನನ್ನು ಆಶ್ರಯಿಸಿಕೊಂಡು ಆತನ ದೈವಾನುಗ್ರಹಕ್ಕೆ ಪಾತ್ರರಾಗಿ ಎಷ್ಟೇ ಕತ್ತಲು ನಮ್ಮನ್ನು ಆವರಿಸಿಕೊಂಡಿದ್ದರೂ ನಾವು ಕರ್ತನ ಅನ್ಯೋನ್ಯತೆಯಲ್ಲಿ ನಡೆಯಲು ಸಾಧ್ಯವಾಗುತ್ತದೆ-Z ’01, 314 (ಖ 2885).

***　***　***

ಫೆಬ್ರುವರಿ - 17

ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ. ಯಾಕೆಂದರೆ, ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.

-ಮತ್ತಾಯ 11:29,30

ಯಾರಾದರೂ ಈ ನೊಗವನ್ನು ಹೊರುವದಾದರೆ, ಅವರಿಗೆ ದೇವರ ವಾಕ್ಯದ ಭರವಸೆ ಇರುವದು. ಆದೇನೆಂದರೆ, ಎಲ್ಲಾ ಕಾರ್ಯಗಳು ಅವರ ಹಿತಕ್ಕಾಗಿಯೇ ನೆರವೇರುವದು; ಹಾಗೂ ಆ ನೊಗದ ಭಾರ ಎಷ್ಟು ಹೆಚ್ಚಾಗಿ ಅವರ ಮೇಲಿರುವದೋ ಅಷ್ಟೇ ಹೆಚ್ಚಾಗಿ ಆಶೀರ್ವಾದ ಹಾಗೂ ಕಾಲಕಾಲಕ್ಕೆ ಪ್ರತಿಫಲ ದೊರೆಯುವದು. ಜೊತೆಗೆ ಈಗಿನ ಜೀವಿತದಲ್ಲಿ ಅವರು ಎಷ್ಟು ಹೆಚ್ಚಾಗಿ ಕಹಿ ಅನುಭವಗಳನ್ನು ಅನುಭವಿಸುವರೋ ಅಷ್ಟೇ ಹೆಚ್ಚಾಗಿ ಅವರ ಮಹಿಮೆ ಮತ್ತು ಅವರ ಗುಣ ಪ್ರಕಾಶಿಸುವದು ಮತ್ತು ಅವರು ದೇವರ ರಾಜ್ಯದಲ್ಲಿ ಪ್ರವೇಶಿಸಲು ಅರ್ಹರಾಗುವರು. ಈ ಒಂದು ದೃಷ್ಟಿಯಲ್ಲಿ ಪ್ರತಿಯೊಂದು ನೊಗವು ಹಗುರವಾಗಿರುವದು. ಕಾರಣ ಕರ್ತನು ಅವರ ನೊಗವನ್ನು ಮೆಚ್ಚುವನು. ಇನ್ನೂ ಹೆಚ್ಚಾಗಿ ಹೇಳಬೇಕಾದರೆ ಆ ನೊಗವು ಬಹಳ ಹಗುರವಾಗಿರುವದು. ಏಕೆಂದರೆ ಕರ್ತನು ನಮ್ಮೊಂದಿಗೆ ಇರುತ್ತಾನೆ-Z ’00, 137 (ಖ 2623).

***   ***   ***

ಫೆಬ್ರುವರಿ - 18

ನಿಮ್ಮ ದೇವರಾದ ಯೆಹೋವನು - ಇವರು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ತನ್ನನ್ನೇ ಪ್ರೀತಿಸುವವರು ಹೌದೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕೆ ನಿಮ್ಮನ್ನು ಪರೀಕ್ಷಿಸುತ್ತಾನೆ. -ಧರ್ಮೋಪದೇಶಕಾಂಡ 13:3

ದೇವರ ರಾಜ್ಯ ಎಂಥವರಿಗೆ ಮೀಸಲಾಗಿದೆ ಎಂದರೆ, ಯಾರು ದೇವರ ಕೃಪೆಯಿಂದ ಹೃದಯಪೂರ್ವಕವಾಗಿ ಕ್ರಿಸ್ತನಂತಾಗುವರೋ ಅಂಥವರು ದೇವರನ್ನು ಪೂರ್ಣಹೃದಯದಿಂದಲೂ, ಪೂರ್ಣಪ್ರಾಣದಿಂದಲೂ ಪ್ರೀತಿಸುತ್ತಾ, “ನನ್ನ ಚಿತ್ತವಲ್ಲ, ಸ್ವಾಮಿ ನಿನ್ನ ಚಿತ್ತವೇ ನನ್ನಲ್ಲಿ ನೆರವೇರಲಿ” ಎಂಬುದಾಗಿ ಹೇಳಿ ನೆರವೇರಿಸುವವರು ಈ ಷರತ್ತಿಗೆ ಬದ್ಧರಾಗಿ ತಮ್ಮನ್ನು ತಾವೇ ದೇವರಿಗೆ ಸಮರ್ಪಿಸಿಕೊಳ್ಳುವದು. ಇಂತವರನ್ನು ದೇವರು ಅಂಗೀಕರಿಸಿ ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳುವನು. ದೇವರನ್ನು ಸಂಪೂರ್ಣವಾಗಿ ಪ್ರೀತಿಸಿ, ತಮ್ಮನ್ನೇ ಆತನಿಗೆ ಸಮರ್ಪಿಸಿಕೊಳ್ಳುವ ಷರತ್ತಿಗಿಂತ ಬೇರೆ ಯಾವ ಷರತ್ತು ಇದಕ್ಕೆ ಸಾಟಿಯಾಗುವುದಿಲ್ಲ. ದೇವರು ತನ್ನನ್ನು ಉತ್ಕøಷ್ಟವಾಗಿ ಪ್ರೀತಿಸುವವರ ಪರವಾಗಿ, ಕಣ್ಣು ಕಾಣದೆ ಇರುವ ಕಿವಿಯು ಕೇಳದೆ ಇರುವ ಹಾಗೂ ಅದರ ಭಾವನೆ ವ್ಯಕ್ತವಾಗದೇ ಇರುವ ಮತ್ತು ಮನುಷ್ಯನ ಹೃದಯದಲ್ಲಿ ಹೊಳೆಯದೇ ಇರುವಂಥ ಪರಲೋಕದ ಅತಿ ಶ್ರೇಷ್ಠವಾದ ಆಶೀರ್ವಾದಗಳನ್ನು ಮೀಸಲಾಗಿಟ್ಟಿದ್ದಾನೆ-Z ’98, 40 (ಖ 2257).

*** *** ***

ಫೆಬ್ರುವರಿ - 19

ಶುದ್ಧರಿಗೆ ಎಲ್ಲವೂ ಶುದ್ಧವೇ; ಆದರೆ, ಮಲಿನವಾದವರಿಗೂ, ನಂಬಿಕೆಯಿಲ್ಲದವರಿಗೂ ಯಾವದೂ ಶುದ್ಧವಲ್ಲ; ಅವರ ಬುದ್ಧಿಯೂ, ಮನಸ್ಸಾಕ್ಷಿಯೂ ಎರಡೂ ಮಲಿನವಾಗಿವೆ. ಅವರು ತಾವು ದೇವರನ್ನು ಅರಿತವರೆಂದು ಹೇಳಿಕೊಳ್ಳುತ್ತಾರೆ; ಆದರೆ ಅವರು ಅಸಹ್ಯರೂ ಅವಿಧೇಯರೂ ಸತ್ಕಾರ್ಯಗಳಿಗೆಲ್ಲಾ ಅಪ್ರಯೋಜಕರೂ ಆಗಿರುವುದರಿಂದ ದೇವರನ್ನು ಅರಿಯೆವೆಂದು ತಮ್ಮ ಕಾರ್ಯಗಳಿಂದಲೇ ಹೇಳಿದಂತಾಯಿತು. -ತೀತ 1:15,16

ಇದು ಎಂಥಹ ಭಯಂಕರ ಸ್ಥಿತಿ! ಎಲ್ಲಾ ದೇವ ಜನರು ಎಷ್ಟೋ ಎಚ್ಚರಿಕೆಯಿಂದಿರಬೇಕು. ಅವರು ಶುದ್ಧ ಹೃದಯ ಮತ್ತು ಶುದ್ಧ ಮನಸ್ಸುಗಳನ್ನು ಹೊಂದಿಕೊಳ್ಳುವದಲ್ಲದೆ ತಮ್ಮ ಮನಸ್ಸಾಕ್ಷಿಯನ್ನು ದೇವರ ವಾಕ್ಯಕ್ಕನುಸಾರವಾಗಿ ಕೋಮಲವಾಗಿಟ್ಟುಕೊಳ್ಳುವದು ಅತಿ ಮುಖ್ಯವಾದುದು. ಈ ಸ್ಥಿತಿಯನ್ನು ಉಳಿಸಿಕೊಂಡು ಮುಂದುವರೆಯಬೇಕಾದರೆ ನಮ್ಮನ್ನು ನಾವು ಆಗಾಗ, ಕಟ್ಟುನಿಟ್ಟಾಗಿ ದೇವರ ಪ್ರೀತಿಯ ನಿಯಮ ಹಾಗೂ ಆ ಮಟ್ಟದಲ್ಲಿ ತೀಕ್ಷ್ಣವಾಗಿ ಪರೀಕ್ಷಿಸಿಕೊಂಡು ಮುನ್ನಡೆಯಬೇಕಾಗಿದೆ.

ನಾನು ಅಹಂಕಾರ ಅಥವಾ ಅಕ್ಕರೆಯ ಇಚ್ಛೆಯ

ಅನುಭವದ ಮೊದಲ ಸಂಪರ್ಕ ಪಡೆದಾಗ,

ಹತ್ತಿ ಉರಿಯುವ ಕಿಚ್ಚಿನಂತಿರುವ ಚಂಚಲ ಚಿತ್ತವನ್ನು

ಶಾಂತವಾಗಿಸಲು ಮುಂದಾಗುತ್ತೇನೆ. -Z’99,214(ಖ 2516).

*** *** ***

ಫೆಬ್ರುವರಿ - 20

ಸದ್ಭಕ್ತನೆಂದಣಿಸಿಕೊಳ್ಳುವ ಯಾವನಾದರೂ ತನ್ನ ನಾಲಿಗೆಗೆ ಕಡಿವಾಣ ಹಾಕದೆ ........... ಅವನ ಭಕ್ತಿ ನಿಷ್ಪ್ರಯೋಜನವಾಗಿದೆ. -ಯಾಕೋಬ 1:26

ನಾಲಿಗೆಯು ಹೃದಯವನ್ನು ಬಿಂಬಿಸುತ್ತದೆ. ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು. ಕಡಿವಾಣವಿಲ್ಲದ ನಾಲಿಗೆ ಸ್ವಾರ್ಥತೆಯಿಂದಲೂ, ವೈರತ್ವದಿಂದಲೂ, ಕಠೋರವಾಗಿಯೂ ಬಡಾಯಿ ಕೊಚ್ಚುತ್ತಾ ಹಾಗೂ ಸುಳ್ಳು ಆಪಾದನೆಗಳಿಂದ ಕೂಡಿರುವ ಮಾತುಗಳನ್ನು ಹೊರಹಾಕುತ್ತದೆ. ಇದು ಕ್ರಿಸ್ತನ ಆತ್ಮವಿಲ್ಲದ ಅಪವಿತ್ರ ಮತ್ತು ಅಶುದ್ಧ ಹೃದಯದಿಂದ ಬಾಯಲ್ಲಿ ಬರುವದನ್ನು ರುಜುವಾತುಪಡಿಸುತ್ತದೆ. ಇಲ್ಲಿಯವರೆಗೆ ಯಾವುದೇ ಧರ್ಮವು ಸಿದ್ಧಿಗೆ ಬಂದಿದ್ದರೂ ಇಂಥಹ ಹೃದಯವುಳ್ಳವನು ರಕ್ಷಣೆಯನ್ನು ಹೊಂದಿಲ್ಲ; ಅಥವಾ ರಕ್ಷಣೆ ಹೊಂದುವ ಸ್ಥಿತಿಯಲ್ಲಿರಲು ಸಾಧ್ಯವಿಲ್ಲ. ಆದರೆ, ಘನ ವೈದ್ಯನಾದ ಕ್ರಿಸ್ತನು ಈ ಕಹಿಯಾದ ಹೃದಯವನ್ನು ವಾಸಿ ಮಾಡಿ ಸ್ವಸ್ಥತೆಯನ್ನುಂಟುಮಾಡಲು ಆತನ ಬಳಿಯಲ್ಲಿರುವ ಔಷಧಿಯನ್ನು ಸರಿಯಾಗಿ ನಿಯಮಿತವಾಗಿ ಸ್ವೀಕರಿಸುವ ಪಕ್ಷದಲ್ಲಿ ಆ ಕಹಿಯಾದ ಹೃದಯವು ಸಿಹಿಯಾಗಿ ಮಾರ್ಪಡುವದು-Z ’99, 215 (ಖ 2517).

*** *** ***

ಫೆಬ್ರುವರಿ - 21

ನೀನೇ ನನ್ನ ಬಂಡೆಯೂ ಕೋಟೆಯೂ ಆಗಿದ್ದೀಯಲ್ಲಾ;

ಆದದರಿಂದ ನಿನ್ನ ಹೆಸರಿನ ನಿಮಿತ್ತ ದಾರಿ ತೋರಿಸಿ ನನ್ನನ್ನು ನಡಿಸು.

-ಕೀರ್ತನೆ 31:3

ಕರ್ತನು ನಮಗೆ ಪಾಠವನ್ನು ಮತ್ತು ಅನುಭವಗಳನ್ನು ಕೊಟ್ಟ ಮೇಲೆ ಅವುಗಳಲ್ಲಿ ಕೆಲವು ನಾವು ಶಾಂತ ಹಾಗೂ ಸುಸ್ಥಿತಿಯಲ್ಲಿದ್ದಾಗ ಒದಗುತ್ತವೆ. ಅವುಗಳ ಕ್ರಮ ಮತ್ತು ಕಾರ್ಯ ವೈಖರಿಯನ್ನು ಬದಲಾಯಿಸಿದಾಗ ಆತನ ಅನುಗ್ರಹವು ನಮ್ಮನ್ನು ಅನುಕೂಲ ಅಥವಾ ಅನಾನುಕೂಲ ಸ್ಥಿತಿಗೆ ಕೊಂಡೊಯ್ಯುತ್ತದೆ. ಆಗ ನಾವು ಒಂದು ಹೊಸ ಅನುಭವ ಮತ್ತು ಹೊಸ ಸ್ಥಿತಿಗೆ ಒಳಗಾಗುತ್ತೇವೆ. ಆಗ ಆತ್ಮೀಯ ಇಸ್ರಾಯೇಲ್ಯರಾದ ನಾವು ಕರ್ತನ ವಿಷಯವಾಗಿ ಗುಣಗುಟ್ಟದೆ ಅಥವಾ ಆಕ್ಷೇಪಿಸದೆ ಅಥವಾ ಕರ್ತನು ನಮ್ಮನ್ನು ಈ ರೀತಿಯಲ್ಲಿ ನಿರ್ಣಯಿಸಬಹುದಾಗಿತ್ತು ಎಂಬುದಾಗಿ ಆಪಾದನೆ ಮಾಡದೆ, ಅಂಥಹ ಸಂದರ್ಭದಲ್ಲಿ ನಂಬಿಕೆಯಿಂದ ಆತನ ನಡೆಸುವಿಕೆಯನ್ನು ಎದುರು ನೋಡುವುದು ಸೂಕ್ತವಾಗಿರುತ್ತದೆ. ಒಂದು ವೇಳೆ ಆತನು ದೈವಾನುಗ್ರಹದ ಗೊತ್ತುಗುರಿಯನ್ನು ವಿವೇಚಿಸಿ ನಾವು ಹಿಂದೆ, ದುರವಸ್ಥೆಯಲ್ಲಿಯೂ ಹಾಗೂ ಕಾಡಿನಲ್ಲಿ ಗುರಿಗೊತ್ತಿಲ್ಲದೆ ಅಲೆದಾಡುವಂಥ ಸ್ಥಿತಿಯಲ್ಲಿ ಇರುವವರಂತೆ ಕಂಡುಬಂದರೂ ದೇವರ ನಡೆಸುವಿಕೆ ಹಾಗೂ ಆತನ ಅನುಗ್ರಹವನ್ನು ನಿಸ್ಸಂದೇಹದಿಂದಲೂ, ವಿಶ್ವಾಸದಿಂದಲೂ ನಮ್ಮ ಹೃದಯಗಳಲ್ಲಿ ನಂಬಿಕೆಯ ಹಾಡನ್ನು ಹಾಡುತ್ತಾ ಅನುಸರಿಸಬೇಕು-Z '02, 249 (ಖ 3060).

*** *** ***

ಫೆಬ್ರುವರಿ - 22

ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತರಾಗಿರಿ. -ಇಬ್ರಿಯ 13:5

ಸ್ವಾರ್ಥತೆಯಿಂದ ಕೂಡಿರುವ ಪ್ರಾರ್ಥನೆಯು ತುಂಬಾ ದುಬಾರಿಯುಳ್ಳದ್ದು. ಕೆಲವರು ಹಣ, ಸಂಪತ್ತನ್ನು ಗಳಿಸಿದರು, ಆದರೆ ಸತ್ಯತೆ ಮತ್ತು ಅದರ ಸಂಬಂಧಪಟ್ಟ ಸೇವೆಯನ್ನು ಕಳಕೊಂಡರು. ಕೆಲವರು ಆರೋಗ್ಯವನ್ನು ಪಡೆದು ಜೊತೆಗೆ ತೀವ್ರ ಸಂಕಟ ಮತ್ತು ಪರೀಕ್ಷೆಗೊಳಗಾದರು. ಕೆಲವರು ತಮ್ಮ ಸಂಬಂಧಿಕರನ್ನು ಸಾವಿನ ದವಡೆಯಿಂದ ಪುನಃ ಜೀವಂತರಾಗಿ ಪಡೆದುಕೊಂಡರೂ ಸ್ವಲ್ಪಕಾಲದಲ್ಲಿಯೇ ಆ ದೆಸೆಯಿಂದ ಹಿಂಸೆ, ಬಾಧೆ ಕೇಡುಗಳನ್ನು ಅನುಭವಿಸಿ ದೇವರು ತಮ್ಮ ಪ್ರಾರ್ಥನೆಗೆ ಉತ್ತರಿಸದಿದ್ದರೆ ತಮಗೆ ಒಳಿತಾಗಿತ್ತು ಎಂದು ಭಾವಿಸುವರು. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವದಾದರೆ ಅವರು ಗುಣಗುಟ್ಟದೆ ದೇವರ ಜ್ಞಾನ, ಅನುಗ್ರಹಗಳನ್ನು ವಿಶ್ವಾಸದಿಂದ ತೃಪ್ತಿಕರವಾಗಿ, ನಡೆದಂಥ ಸನ್ನಿವೇಶಗಳನ್ನು ಅಂಗೀಕರಿಸಬಹುದಾಗಿತ್ತು. ಇದೇ ರೀತಿಯಲ್ಲಿ ಆತ್ಮೀಕ ಇಸ್ರಾಯೇಲ್ಯರಾದ ಹೊಸ ಜೀವಿಗಳು ದೇವರಿಂದ ದೊರಕಿದ ಉಡುಗೊರೆ ಬಹುಮಾನಗಳನ್ನು ವಿವೇಕದಿಂದ ಪಾಲಿಸಬೇಕು. ಅವರಿಗೆ ಸಿಗುವ ಪ್ರತಿಯೊಂದು ಉಡುಗೊರೆಯು ದೇವರಿಂದ ದೊರಕಿದೆಯೆಂದು ಕೃತಜ್ಞತೆಯಿಂದ

ಅಂಗೀಕರಿಸುವವರಾಗಿರಬೇಕು. ಆದರೆ, ಅವರ ಬೇಡಿಕೆಗಳು ಆತ್ಮೀಯ ಉಡುಗೊರೆಗಳಾಗಿ ಇರಬೇಕು. ದೀರ್ಘಶಾಂತಿ, ತಾಳ್ಮೆ ಮತ್ತು ಸಂತೃಪ್ತಿಗಳನ್ನು ಪಡೆಯಲು ಪ್ರಾರ್ಥಿಸಬೇಕು-Z '02, 250 (ಖ 3061).

*** *** ***

ಫೆಬ್ರುವರಿ - 23

[ಯೆಹೋವನು] - ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು [ಅನ್ನುತ್ತಾನಲ್ಲಾ].

-ಕೀರ್ತನೆ 32:8

ಆತ್ಮೀಕ ಇಸ್ರಾಯೇಲಿನ ಒಂದು ಬಹುಮುಖ್ಯವಾದ ಪಾಠವೇನೆಂದರೆ, ಜೀವನದ ಪ್ರತಿಯೊಂದು ನಡವಳಿಯಲ್ಲೂ ಕರ್ತನ ನಡಿಸುವಿಕೆಯನ್ನು ನಿರೀಕ್ಷಿಸುವುದಾಗಿದೆ, ಹಾಗೂ ಭೌತಿಕ ಅಥವಾ ಪಾರಮಾರ್ಥಿಕವಾಗಿರಲಿ ಕರ್ತನ ಚಿತ್ತವನ್ನು ಬಿಟ್ಟು ಮುಂದುವರಿಯಬಾರದು. ನಾವು ಪರಮ ಕಾನಾನಿಗೆ ಪ್ರಯಾಣ ಮಾಡುತ್ತಿರುವಲ್ಲಿ ನಮಗಾಗುವ ಎಲ್ಲಾ ಇತರೇ ಅನುಭವಗಳನ್ನು ಅನುಭವಿಸಿದರೆ ಮಾತ್ರ, ದೇವರ ವಾಗ್ದಾನಗಳನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯ. ಹೀಗಿರುವಲ್ಲಿ ನಮಗಿರುವ ಪಾಠ ಪ್ರೇರಣೆಯಾಗಿರುತ್ತದೆ. ಕರ್ತನಿಗೆ ಎಲ್ಲಾ ರೀತಿಯಲ್ಲಿಯೂ ನಾವು ಗುಣಗುಟ್ಟದೆ ವಿಧೇಯರಾಗಿದ್ದುಕೊಂಡು ಆತನ ನಡೆಸುವಿಕೆಯನ್ನು ನಿರೀಕ್ಷಿಸುವದಾಗಿದೆ. ನಾವು ನಿರೀಕ್ಷಿಸಿದಂತೆ ಇದು ಸಂತೋಷದಾಯಕವಾಗಿರಬೇಕಾದರೆ ಹಿಂದೆ ನಮಗಾದ ಅನುಭವಗಳಿಂದ ಕಲಿತ ಪಾಠ ಹಾಗೂ ಇವುಗಳಿಗಿಂತ ಹೆಚ್ಚಾಗಿ ನಂಬಿಕೆ, ಕರ್ತನ ಶಕ್ತಿ ಮತ್ತು ಆತನ ನಂಬಿಗಸ್ತತೆಯಿಂದ ಆತನಲ್ಲಿ ನಾವಿಟ್ಟಿರುವ ವಿಶ್ವಾಸದಿಂದ ಮಾತ್ರ ಸಾಧ್ಯ-Z '02, 251 (ಖ 3062).

*** *** ***

ಫೆಬ್ರುವರಿ - 24

ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನೆಂದರೆ, ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು. -ರೋಮಾಪುರ 8:3,4; 8:3,4

ಈ ಭರವಸೆಗಳಲ್ಲಿ ನಮಗೆ ಶ್ರೇಷ್ಠವಾದ ಸಂತೈಸುವಿಕೆ ಹಾಗೂ ಸಮಾಧಾನಗಳು ದೊರಕಿವೆ. ಇವು ನಿಜವಾಗಿಯೂ ಆಶ್ಚರ್ಯಕರವಾದ ಸಜೀವ ವಾಕ್ಯಗಳಾಗಿವೆ. ಅವು ನಿರೀಕ್ಷೆಯನ್ನು ನಮ್ಮಲ್ಲಿ

ಹುಟ್ಟಿಸುತ್ತವೆ.  ದೇವರು ಶಾರೀರಿಕ ಪರಿಪೂರ್ಣತೆಯನ್ನು ನಮ್ಮಿಂದ ನಿರೀಕ್ಷಿಸದೆ ಹೃದಯದ ಪರಿಪೂರ್ಣ ಇಂಗಿತವನ್ನು ಅಂಗೀಕರಿಸುವದಾದರೆ, ನಾವು ದೇವರು ಉದ್ದೇಶಿಸಿ ನೇಮಿಸಿರುವ ಪರಿಪೂರ್ಣ ಮಟ್ಟವನ್ನು ನಿರೀಕ್ಷೆಯುಳ್ಳವರಾಗಿ ತಲುಪಲು ಸಾಧ್ಯವಿಲ್ಲದೇ ಇದ್ದರೂ ಆಂತರ್ಯದಲ್ಲಿ, ಆತ್ಮೀಕವಾಗಿ ದೇವರ ಆತ್ಮದ ಅಗತ್ಯತೆಗೆ ಅನುಗುಣವಾಗಿ ನಡೆಯಲು ಸಾಧ್ಯವಾಗುತ್ತದೆ.  ನಾವು ಮಾನಸಿಕವಾಗಿ ದೇವರಾತ್ಮನ ಅಗತ್ಯತೆಗೆ ತಕ್ಕಂತೆ ಪರಿಪೂರ್ಣ ಇಂಗಿತದಿಂದ ಕೂಡಿದವರಾಗಿ ನಡೆಯುವದನ್ನು ದೇವರು ಮೆಚ್ಚುವನು.  ಇದನ್ನು ಅಂದರೆ ನಮ್ಮ ಪರಿಪೂರ್ಣ ಸಂಕಲ್ಪವನ್ನು ಪರಲೋಕದ ತಂದೆಯು ನಿರೀಕ್ಷಿಸುವನು-Z ’02, 248 (ಖ 3060).

***   ***   ***

ಫೆಬ್ರುವರಿ - 25

ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು.

-ಮತ್ತಾಯ 4:4

ಮನುಷ್ಯನ ಜೀವನ ಅವನು ಹೊಂದಿರುವ ಯಥೇಚ್ಛವಾದ ವಸ್ತುಗಳಿಂದಲ್ಲ.  ಉದಾಹರಣೆಗಾಗಿ ಆಹಾರ ಮತ್ತು ಉಡುಪು - ಇವುಗಳಿಂದಲ್ಲ ಎಂಬುದಾಗಿ ನಾವು ತಿಳಿಯಬೇಕು.  ಆದರೆ, ಅವನ ಜೀವನ ಸಮೃದ್ಧಿಯಾಗಿಯೂ, ವೈಭವಪೂರಿತವಾಗಿಯೂ ಮತ್ತು ಉನ್ನತವಾಗಿಯೂ ಇರಬೇಕಾದರೆ ಅವನು ತನ್ನನ್ನು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡುವದರ ಮೇಲೆ ಅವಲಂಬಿಸಿದೆ.  ಹೀಗಾಗಲು ಅವನು ದೇವರ ಬಾಯಿಯಿಂದ ಹೊರಡುವ ಎಲ್ಲಾ ಮಾತುಗಳನ್ನು ಎಚ್ಚರಿಕೆಯಿಂದ ಆಲಿಸಬೇಕು; ಎಲ್ಲಾ ಬುದ್ಧಿ ಮಾತುಗಳು, ಪ್ರೋತ್ಸಾಹಕಾರಕ ಮಾತುಗಳು, ಪ್ರತಿಯೊಂದು ವಾಗ್ದಾನಗಳು ಇವೆಲ್ಲವೂ ದೇವರು ಈಗ ಕರೆದಿರುವವರ ಅಭಿವೃದ್ಧಿಯಾಗುವದಕ್ಕೂ, ನಿತ್ಯ ಜೀವವನ್ನು ಪಡೆಯಲಿಕ್ಕೂ ಮತ್ತು ಆತನ ಮಗನ ಸಾಮ್ರಾಜ್ಯದಲ್ಲಿ ಬಾಧ್ಯಸ್ಥರಾಗುವದಕ್ಕೂ ಅವಶ್ಯಕವಾಗಿವೆ.  ಹೀಗಿರುವಲ್ಲಿ ಕರ್ತನ ಶಿಷ್ಯರೂ ಮತ್ತು ವಿದ್ಯಾರ್ಥಿಗಳಾಗಿರುವ ನಾವು ದೇವರ ಎಲ್ಲಾ ಮಾತುಗಳನ್ನು ನಮ್ಮ ಹೃದಯದಲ್ಲಿಟ್ಟುಕೊಂಡು ದೇವರು ಈ ವಾಕ್ಯದಲ್ಲಿ ನಮಗೆ ದಯಪಾಲಿಸಿರುವ ಉದ್ದೇಶವನ್ನು ನೆರವೇರಿಸೋಣ-Z ’02, 246,248 (ಖ 3058).

***   ***   ***

ಫೆಬ್ರುವರಿ - 26

ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ, ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತೇನೆ.

- ಫಿಲಿಪ್ಪಿ 4:4

ನಮ್ಮಲ್ಲಿ ಬಹಳಷ್ಟು ಮಂದಿ ಸಂತೋಷಿಸುವ ಕ್ರೈಸ್ತರಿಲ್ಲ ಅಥವಾ ಕರ್ತನಲ್ಲಿ ಸಂತೋಷಿಸುವರಾದರೂ ಅವರು ಹೆಚ್ಚಾದ ಸಂತೋಷಪಡುವವರಾಗಿಲ್ಲ. ಸಾಮಾನ್ಯವಾಗಿ ಗಲಾಟೆಯಿಂದಾಗಲಿ, ಅರಚಾಟುವಿಕೆಯಿಂದಾಗಲಿ ಈ ಸಂತೋಷಪಡುವದಲ್ಲ ಅಥವಾ ವಿರೋಧಿಸುವದೂ ಅಲ್ಲ. ಅದು ಪ್ರಶಾಂತತೆ, ಸಂತೋಷ, ಶಾಂತಿ ಮತ್ತು ಆತ್ಮಾನಂದದಿಂದ ಕೂಡಿರುವ ಸಂತೋಷವಾಗಿದೆ; ಆದಾಗ್ಯೂ ಕೆಲವರು ತಪ್ಪಾಗಿ ತಿಳಿದಿರುವಂತೆ, ಸಂತೋಷಪಡಲು ಅಬ್ಬರಿಸುತ್ತಾ ಗಲಾಟೆಯಿಂದ ಕೂಗಾಟ ಮಾಡುವದು ಅವಶ್ಯವೆಂಬ ಅರ್ಥವಲ್ಲ. ಯಾರು ಕರ್ತನ ಸಂಸರ್ಗದಲ್ಲಿ ಬಹಳ ಹತ್ತಿರವಿರುತ್ತಾರೋ ಅಂಥವರು ಮಾತ್ರ ಯಾವಾಗಲೂ ಸಂತೋಸಿಸುವದಕ್ಕೆ ಸಾಧ್ಯ. ಅಂಥವರು ಕರ್ತನಲ್ಲಿ ತಾವು ಐಕ್ಯವಾಗಿದ್ದೇವೆ ಎಂಬುದನ್ನು ಅರಿಯುತ್ತಾರೆ. ಅಲ್ಲದೆ ಆತನ ರಕ್ಷಣೆ ಮತ್ತು ಆರೈಕೆ ಅವರಿಗೆ ಇರುತ್ತದೆ ಹಾಗೂ ಆತನ ವಾಗ್ದಾನವು ಖಂಡಿತವಾಗಿದೆ. ಅದೇನೆಂದರೆ ಎಲ್ಲಾ ವಿಷಯಗಳು ಅವರ ಕ್ರಿಸ್ತೀಯ ಜೀವನದ ಅಭ್ಯುದಯಕ್ಕಾಗಿ ನೆರವೇರುತ್ತಿರುವವು ಎಂಬುದನ್ನು ಮನಗಂಡು ಕರ್ತನಲ್ಲಿ ಸಂತೋಷಿಸುವರು-Z '03,7 (ಖ 3127).

***       ***       ***

ಫೆಬ್ರುವರಿ - 27

ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ. -ಫಿಲಿಪ್ಪಿ 4:5

ಮೇಲ್ಕಂಡ ವಚನದಲ್ಲಿ 'ಸೈರಣೆ' ಎಂಬ ಪದವು ಗ್ರೀಕ್ ಭಾಷೆಯಲ್ಲಿನ (ಒಔಆಇಖಂಖಿIಔಓ) ಎಂಬ ಪದದ ಭಾಷಾಂತರವಾಗಿದ್ದು ಅದರ ಉದ್ದೇಶವು ಸೌಮ್ಯ ಉಳ್ಳದ್ದಾಗಿದ್ದು, ನಮ್ಮ ಹಕ್ಕನ್ನು ಪೂರ್ಣ ಒತ್ತಡದಿಂದ ಬಲಾತ್ಕರಿಸುವದಿಲ್ಲವೆಂಬುದಾಗಿ ಕಂಡುಬರುತ್ತದೆ. ಕ್ರಿಸ್ತನ ರಾಜ್ಯದಲ್ಲಿ ಸೇರುವ ಪ್ರತಿಯೊಬ್ಬರಿಗೂ ಕರುಣೆ ಮತ್ತು ಉದಾರ ಮನೋಭಾವ ಮುಂತಾದ ಗುಣಗಳು ಖಂಡಿತವಾಗಿ ಇರಲೇಬೇಕು. ಆದಷ್ಟುಮಟ್ಟಿಗೆ ನಾವು ನಿರ್ವಹಿಸುವ ದಿನನಿತ್ಯದ ಕರ್ತವ್ಯಗಳಲ್ಲಿ ನಂಬಿಗಸ್ತರಾಗಿಯೂ ಮತ್ತು ನ್ಯಾಯಕ್ಕನುಗುಣವಾಗಿಯೂ ವರ್ತಿಸಬೇಕು. ಅಲ್ಲದೆ, ಇತರರ ವಿಷಯವಾಗಿಯೂ ನಾವು ಕರುಣೆ ಹಾಗೂ ನೀತಿಬದ್ಧರಾಗಿ ನಡೆಯಬೇಕಾಗಿದೆ. ಹೀಗೆ ನಡೆದರೆ ನಾವು ದೇವರ ಮಕ್ಕಳು ಎಂದೆಣಿಸಿಕೊಳ್ಳುತ್ತೇವೆ. ಏಕೆಂದರೆ, ಪರಲೋಕದಲ್ಲಿರುವ ನಮ್ಮ ತಂದೆಯು ಕೃತಜ್ಞತೆ ಇಲ್ಲದವರ ವಿಷಯದಲ್ಲೂ ದಯ ತೋರಿಸುವವನಾಗಿದ್ದಾನೆ-Z '03, 7 (ಖ 3128).

***       ***       ***

ಫೆಬ್ರುವರಿ - 28

ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. -ಫಿಲಿಪ್ಪಿ 4:6

ದೇವರು ತನಗೆ ತಿಳಿದಿರುವ ಹಾಗೆ ನಮಗೆ ಏನು ಬೇಕೋ ಅದನ್ನು ನಮ್ಮ ಬೇಡಿಕೆಯಿಲ್ಲದೆ ತನ್ನ ವಾಗ್ದಾನದಂತೆ ಏಕೆ ಪೂರೈಸಬಾರದು ಎಂಬ ಪ್ರಶ್ನೆ ಉದ್ಭವಿಸಬಹುದು. ಅದು ಹಾಗಲ್ಲ, ಏಕೆಂದರೆ ನಾವು ಎಲ್ಲಕ್ಕೂ ಮುಂಚಿತವಾಗಿ ನಮ್ಮ ಹೃದಯ ಧೋರಣೆಯಂತೆ ಆತನಿಂದ ಸಹಾಯ ಹೊಂದಿ ಅದರ ಉಪಯೋಗವನ್ನು ಪಡೆಯುವದಾಗಿದೆ. ಹೀಗಿದ್ದರೂ ದೇವರು ನಮ್ಮಲ್ಲಿ ಇದುವರೆವಿಗೂ ಮತ್ತು ಈಗಲೂ ತೋರಿಸುವ ಕಾಳಜಿಯ ವಿಷಯವಾಗಿ ಸಾಕಷ್ಟು ಮೆಚ್ಚಿಗೆಯನ್ನು ನಾವು ವ್ಯಕ್ತಪಡಿಸುವದಿಲ್ಲ ಎನ್ನುವದು ನಮಗೆ ಖಚಿತವಾಗಿ ತಿಳಿದಿದೆ. ಇದಲ್ಲದೆ ನಾವು ಪ್ರಾರ್ಥನೆ ಮಾಡುತ್ತಾ ಕೃತಜ್ಞತೆಯನ್ನು ದೇವರಿಗೆ ಸಲ್ಲಿಸುತ್ತಿರುವ ಸ್ಥಿತಿಯಲ್ಲೂ ಆತನು ನಮ್ಮನ್ನು ಇದುವರೆವಿಗೂ ನಡೆಸಿದ ಹಾಗೂ ಈಗಲೂ ನಡೆಸುತ್ತಿರುವ ವಿಷಯದ ಬಗ್ಗೆ ಅರ್ಧದಷ್ಟು ಕೃತಜ್ಞತೆಯನ್ನೂ ವ್ಯಕ್ತಪಡಿಸುವದಿಲ್ಲ. ಆದರೆ ಮುಂದೆ ಮುಂದೆ ಸಾಗುತ್ತಾ ಹೋಗುವಾಗ ದೇವರು ನಮ್ಮನ್ನು ಸಂಪೂರ್ಣವಾಗಿ ತಿಳಿದಿರುವಂತೆ ನಾವು ಅವುಗಳ ವಿವರಗಳನ್ನು ತಿಳಿಯಲು ಸಾಧ್ಯವಾಗುತ್ತದೆ-Z ’03, 8 (ಖ 3128).

*** *** ***

ಫೆಬ್ರುವರಿ - 29

ದೇವರು ಪ್ರೀತಿ ಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ. ದೇವರು ಅವನಲ್ಲಿ ನೆಲೆಗೊಂಡಿದ್ದಾನೆ. -1ಯೋಹಾನ 4:16

ನ್ಯಾಯವನ್ನು ಒಂದು ಅಳತೆಯ ಮಟ್ಟಿಗೆ ತುಂಬಲು ಸಾಧ್ಯ. ಆದರೆ, ಪ್ರೀತಿಯು ಅದನ್ನು ಕುಲುಕಿಸಿ ಅದುಮಿ, ಅಳತೆ ಮೀರಿ ತುಂಬಿದ ರಾಶಿಯನ್ನಾಗಿ ಮಾಡಿ, ನ್ಯಾಯದ ಅಳತೆಯನ್ನು ಹೊರಸೂಸುತ್ತದೆ. ಪ್ರೀತಿಯನ್ನು ಆಗ್ರಹಪೂರ್ವಕವಾಗಿ ನಿರೀಕ್ಷಿಸಲಾಗುವದಿಲ್ಲ ಅಥವಾ ಅದರಲ್ಲಿ ಏನೋ ಒಂದು ಕೊರತೆ ಇದೆ ಎಂದು ತೆಗಳಲು ಸಾಧ್ಯವಿಲ್ಲ. ಅದನ್ನು ಕೃತಜ್ಞತೆಯಿಂದಲೂ, ಗಂಭೀರತೆಯಿಂದಲೂ ಅಂಗೀಕರಿಸಿ ವಿನಿಮಯ ಮಾಡುವದಾಗಿದೆ. ಈ ಗುಣವನ್ನು ಬಯಸುವವನು ಅದನ್ನು ಅತಿ ಶ್ರೇಷ್ಠ ದರ್ಜೆಯಲ್ಲಿ ಕೊಂಡಾಡುವವನಾಗಿ ಗಾಂಭೀರ್ಯದಿಂದ ಬಯಸತಕ್ಕದ್ದಾಗಿದೆ. ಇಂಥಹ ಪ್ರೀತಿಯು ಬಹು ಬೆಲೆಯುಳ್ಳದ್ದು. ಇದನ್ನು ಇತರೆ ಗೌರವಾನ್ವಿತ ವ್ಯಕ್ತಿಗಳು ಅವರು ಹೊಂದಿದ ಉದಾತ್ತ ಸ್ವಭಾವದ ಮುಖಾಂತರವಾಗಿ ಆ ಗುಣಗಳನ್ನು ನಿರೀಕ್ಷಿಸಿ ಪಡೆಯಬೇಕಾಗಿದೆ-Z ’02, 266 (ಖ 3070).

*** *** ***